# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2173 (2317) |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 27/03/2026 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಾರ್ಮಿಕ ಇಲಾಖೆಯ ಕಾರ್ಮಿಕರಿಗೆ ವಿತರಿಸಲಾಗುವ ಸುರಕ್ಷತಾ ಪರಿಕರಗಳನ್ನು ಒಳಗೊಂಡಿರುವ ಸುರಕ್ಷತಾ ಕಿಟ್‌ಗಳಿಗೆ ಸಂಬಂಧಿಸಿದಂತೆ ಹಿಂದೆ ಖರೀದಿಸಿರುವ ಸುರಕ್ಷತಾ ಕಿಟ್ ಗಳು ಇನ್ನು ಸಂಪೂರ್ಣವಾಗಿ ವಿತರಣೆ ಆಗದೇ ಇರುವ ಸಂದರ್ಭದಲ್ಲಿ ಸುಮಾರು 4 ಲಕ್ಷ ಹೊಸ ಸುರಕ್ಷತಾ ಕಿಟ್ ಗಳನ್ನು ಖರೀದಿಸಲಾಗಿದೆ ಎಂಬ ಮಾಹಿತಿ ಇದ್ದು, ಈ ಕುರಿತು ಸರ್ಕಾರದ ಉತ್ತರವೇನು; | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಒಟ್ಟು 24.81 ಲಕ್ಷ ನೋಂದಾಯಿತ ಫಲಾನುಭವಿಗಳಿದ್ದು, 2024-25ರಲ್ಲಿ 1.96 ಲಕ್ಷ ಸುರಕ್ಷತಾ ಕಿಟ್‌ಗಳನ್ನು ಖರೀದಿ ಮಾಡಿ ಈಗಾಗಲೇ 1.08 ಲಕ್ಷ ಕಿಟ್‌ಗಳನ್ನು ವಿತರಿಸಲಾಗಿದ್ದು, ಉಳಿದ ಕಿಟ್‌ಗಳನ್ನು ವಿತರಿಸುವ ಕಾರ್ಯ ಪ್ರಗತಿಯಲ್ಲಿದೆ.<br><br>ಉಳಿದ ಫಲಾನುಭವಿಗಳಿಗೆ ಸೇಫ್ಟಿ ಕಿಟ್ ನೀಡಲು 2025-26ರಲ್ಲಿ 3.89 ಲಕ್ಷ ಕಿಟ್‌ಗಳನ್ನು ಖರೀದಿಸಲು ಕ್ರಮಕೈಗೊಂಡಿದ್ದು, ಸರಬರಾಜು ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>ಕಟ್ಟಡ ಕಾರ್ಮಿಕರು ಅಪಾಯಕಾರಿ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದು, ಅವರಿಗೆ ಸುರಕ್ಷತೆ ಒದಗಿಸುವ ಹಿತ ದೃಷ್ಟಿಯಲ್ಲಿ ಈ ಕಿಟ್‌ಗಳನ್ನು ನೀಡಲಾಗುತ್ತಿದೆ. |
| ಆ) | ಈ ಹಿಂದೆ ಖರೀದಿಸಿರುವ 75000 ಸುರಕ್ಷತಾ ಕಿಟ್‌ಗಳನ್ನು ವಿತರಿಸದೇ ಇರುವಾಗ 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಹೊಸದಾಗಿ ಸುರಕ್ಷತಾ ಕಿಟ್‌ಗಳನ್ನು ಖರೀದಿಸುವ ತುರ್ತು ಅಗತ್ಯವೇನು; (ವಿವರ ಒದಗಿಸುವುದು) | ಕಟ್ಟಡ ಕಾರ್ಮಿಕರು ಅಪಾಯಕಾರಿ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದು, ಅವರಿಗೆ ಸುರಕ್ಷತೆ ಒದಗಿಸುವ ಹಿತ ದೃಷ್ಟಿಯಲ್ಲಿ ಸುರಕ್ಷತಾ ಕಿಟ್‌ಗಳನ್ನು ನೀಡಲಾಗುತ್ತಿದೆ. ಇದರಿಂದಾಗಿ ಕಾರ್ಮಿಕರ ಪ್ರಾಣ ಹಾನಿಯನ್ನು ತಪ್ಪಿಸಲು ಸಾಧ್ಯವಾಗಲಿದೆ. |
| ಇ) | ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕಾರ್ಮಿಕರಿಗೆ ಸೌಲಭ್ಯ ನೀಡುವಾಗ ಆಧಾರ್ ಕಾರ್ಡ್, ಗುರುತಿನ ಚೀಟಿಗಳ ಸಮಗ್ರ ಮಾಹಿತಿ ಪಡೆದು ಇವುಗಳ ಆಧಾರದ ಮೇಲೆ ಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಣೆ ಮಾಡುವ ಮೂಲಕ ಮಾನ್ಯ | ಸೇಫ್ಟಿ ಕಿಟ್‌ಗಳನ್ನು ವೃತ್ತಿಗೆ ಅನುಗುಣವಾಗಿ ಶಿಷ್ಟಾಚಾರದಂತೆ ವಿತರಣೆ ಮಾಡಲಾಗಿದೆ. ಕಿಟ್‌ಗಳನ್ನು ವಿತರಣೆ ಮಾಡುವಾಗ ಕಾರ್ಮಿಕ ಕಾರ್ಡ್‌ಗಳು ಮತ್ತು ಆಧಾರ್ ಕಾರ್ಡ್‌ಗಳ ಪ್ರತಿಗಳನ್ನು ಪಡೆದು, ನಂತರ ಕಾರ್ಮಿಕರ ಸಹಿಯನ್ನು ಪಡೆಯಲಾಗಿದೆ.<br><br>ಸುರಕ್ಷತಾ ಕಿಟ್‌ಗಳನ್ನು ಅರ್ಹ |

| | | |
|---|---|---|
| | ಸರ್ವೋಚ್ಚ ನ್ಯಾಯಾಲಯದ ಆದೇಶ ಪಾಲನೆ ಮಾಡಿರುವ ಬಗ್ಗೆ ಸಮಗ್ರ ವಿವರ ನೀಡುವುದು; | ನೋಂದಾಯಿತ ಕಾರ್ಮಿಕರಿಗೆ ವಿತರಿಸಿ ಅವರಿಂದ ಪಡೆದುಕೊಂಡಿರುವ ದಾಖಲೆಗಳ ಪ್ರತಿಯನ್ನು **ಅನುಬಂಧದಲ್ಲಿ** ಪೆನ್‌ಡ್ರೈವ್ ಮೂಲಕ ನೀಡಿದೆ. |
| ಈ) | ಸುರಕ್ಷತಾ ಕಿಟ್ ಗಳನ್ನು ಸರಬರಾಜು ಮಾಡಲು ಟೆಂಡರ್ ಕರೆಯಲಾಗಿದೆಯೇ; ಟೆಂಡರ್ ನ ಮೊತ್ತ ಎಷ್ಟು ಸುರಕ್ಷತಾ ಕಿಟ್‌ನ ಪರಿಕರಗಳ ಗುಣಮಟ್ಟ ಪರಿಶೀಲಿಸಲಾಗಿದೆಯೇ; ಸುರಕ್ಷತಾ ಕಿಟ್‌ನಲ್ಲಿ ಇರುವ ಪ್ರತಿಯೊಂದು ವಸ್ತುವನ್ನು ಎಷ್ಟು ಮೊತ್ತಕ್ಕೆ ಖರೀದಿಸಲಾಗಿದೆ? (ಮಾಹಿತಿ ಒದಗಿಸುವುದು) | ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಕರೆದು ಅರ್ಹ ಸರಬರಾಜು ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿರುತ್ತದೆ.<br><br>ಸುರಕ್ಷತಾ ಕಿಟ್ ಸಂಬಂಧ 2025-26ನೇ ಸಾಲಿನಲ್ಲಿ ಕರೆದಿರುವ ಇ-ಟೆಂಡರ್ ಗಳ ಮೊತ್ತ ರೂ.195.94 ಕೋಟಿ ಆಗಿರುತ್ತದೆ. ಸುರಕ್ಷತಾ ಕಿಟ್‌ನಲ್ಲಿರುವ ಸಾಮಾಗ್ರಿಗಳನ್ನು ಒಟ್ಟಾರೆಯಾಗಿ ಕಿಟ್ ರೂಪದಲ್ಲಿ ಖರೀದಿಸಲು ಇ-ಟೆಂಡರ್ ಕರೆಯಲಾಗಿರುತ್ತದೆ. ಪ್ರತಿಯೊಂದು ಸಾಮಾಗ್ರಿಯನ್ನು ಪ್ರತ್ಯೇಕವಾಗಿ ಖರೀದಿಸಿರುವುದಿಲ್ಲ.<br><br>ಟೆಂಡರ್ ವಾರು ಒಟ್ಟು ಪರಿಮಾಣದಲ್ಲಿ Randomly ಶೇ.10ರಷ್ಟು ವಿವಿಧ ವೃತ್ತಿವಾರು ಸುರಕ್ಷತಾ ಕಿಟ್ ಗಳ ಗುಣಮಟ್ಟವನ್ನು ಪರಿಶೀಲಿಸಲಾಗಿರುತ್ತದೆ. ಸುರಕ್ಷತಾ ಕಿಟ್‌ನ ಸಾಮಾಗ್ರಿಗಳ ಗುಣಮಟ್ಟ ಪರಿಶೀಲಿಸಿರುವ ಅಧಿಕಾರಿಗಳ ವಿವರ ಈ ಕೆಳಗಿನಂತಿದೆ.<br><br>1. ಶ್ರೀ ಸತೀಶ್ ರಾವ್ ಎನ್.ಎಸ್., ಹೆಚ್.ಓ.ಡಿ, ಮೆಕಾನಿಕಲ್ ಇಂಜಿನಿಯರಿಂಗ್, ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್. ಸರ್ಕಲ್, ಬೆಂಗಳೂರು.<br>2. ಶ್ರೀ ರವಿಶಂಕರ್ ಸಿ.ವಿ., ಪ್ರಾಂಶುಪಾಲರು, ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್. ಸರ್ಕಲ್, ಬೆಂಗಳೂರು.<br>3. ಶ್ರೀ ಮಲ್ಲಿಕಾರ್ಜುನ್ ಎನ್. ಹಿರಿಯ ಅಧ್ಯಾಪಕರು, ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್. ಸರ್ಕಲ್, ಬೆಂಗಳೂರು.<br><br>ಸುರಕ್ಷತಾ ಕಿಟ್‌ನಲ್ಲಿರುವ ಎಲ್ಲಾ ಪರಿಕರಗಳು ISI ಪ್ರಮಾಣೀಕೃತವಾಗಿರುತ್ತದೆ. |

**ಕಾಇ 160 ಎಲ್‌ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**